ರೂಪಾಯಿ ರಿಲೀಸ್ ಆಗಿದೆ. ಆದರೆ ಯಾರು ಇಂಜಿನಿಯರ್‌ಗಳು ಮತ್ತು ಕಂಟ್ರಾಕ್ಟರುಗಳು ಕೂಡಿ ಕೆಲಸ ಮಾಡುತ್ತಾರೋ ಅವರಿಬ್ಬರೂ ಶಾಮೀಲಾಗಿ ಸೇತುವೆಗಳ ಪರಿಸ್ಥಿತಿ ಈ ರೀತಿ ಆಗಿದೆ. ಅವರುಗಳು ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಂದಿಸುತ್ತೇನೆ.

ಪ್ರಕಟಣೆ

ಸದಸ್ಯರಿಗೆ ಗೈರು ಹಾಜರಾಗಲು ಅನುಮತಿ ಕೋರಿಕೆ

ಅಧ್ಯಕ್ಷರು —ವಿಧಾನಸಭಾ ಸದಸ್ಯರುಗಳಾದ ಶ್ರೀಮತಿ ವಿಜಯಲಕ್ಷ್ಮೀ ಬಂಡೀಸಿದ್ದೇಗೌಡರಿಗೆ ದಿನಾಂಕ 16-5-1988 ರಿಂದ 20-5-1988 ರವರೆಗೆ ಕೆಲವೊಂದು ಕಾರಣಗಳಿಂದ ವಿಧಾನ ಸಭೆಯ ಉಪವೇಶನಗಳಿಗೆ ಗೈರು ಹಾಜರಾಗಲು ಕೋರಿ ಪತ್ರ ಬರೆದಿದ್ದಾರೆ. ಮೇಲೆ ಸೂಚಿಸಿದಂಥ ಅವಧಿಯಲ್ಲಿ ಅವರಿಗೆ ಗೈರು ಹಾಜರಾಗಲು ಈ ಸದನವು ಒಪ್ಪಿಗೆ ನೀಡುತ್ತದೆಯೆ ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಶ್ರೀಮತಿ ವಿಜಯಲಕ್ಷ್ಮಿ ಬಂಡೀಸಿದ್ದೇಗೌಡರು ಗೈರುಹಾಜರಾಗಲು ಅನುಮತಿ ನೀಡಲಾಗಿದೆ.

ಈಗ ಇಲ್ಲಿಗೆ ಸಭೆಯನ್ನು ಮುಂಗಿಸೋಣ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ನಾನು ನನ್ನ ಹೆಸರನ್ನು ಕೊಟ್ಟು ಇದುವರೆಗೆ ಕಾಯುತ್ತಾ ಕುಳಿತಿದ್ದೇನೆ.

ಅಧ್ಯಕ್ಷರು.—ಸದನದ ಅಭಿಪ್ರಾಯದ ಪ್ರಕಾರ ಹೋಗಬೇಕಾಗುತ್ತದೆ. ಚರ್ಚೆ ಇವತ್ತಿಗೇನೂ ಮುಗಿಯುವುದಿಲ್ಲ. ಸೋಮವಾರವೂ ಮುಂದುವರಿಸುತ್ತೇವೆ. ನಿಮಗೂ ಅವಕಾಶ ಕೊಡುತ್ತೇನೆ. ನಿಮ್ಮ ಹೆಸರು ಪಟ್ಟಿಯಲ್ಲಿದೆ. ಸೋಮವಾರ ನಿಮಗೆ ಅವಕಾಶ ಕೊಡುತ್ತೇನೆ. ಈಗ ಸಭೆಯನ್ನು ಇಲ್ಲಿಗೆ ಮುಕ್ತಾಯ ಗೊಳಿಸಿ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಮುಂದೂಡಲಾಗಿದೆ.

(ಸಭೆ ಮಧ್ಯಾಹ್ನ ಒಂದು ಗಂಟೆ ಮೂವತ್ತೈದು ನಿಮಿಷಕ್ಕೆ ಮುಕ್ತಾಯವಾಗಿ ಮರುದಿನ ದಿನಾಂಕ ೧೬ರಂದು ಸೋಮವಾರ ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು)

---

† ಈ ಚಿಪ್ಪೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.